**ಓ ಎಸ್ ನಂಃ 148-22**
**ಪಿ ಡಬ್ಲ್ಯೂ ಃ 1**

**ದಿಃ 09-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಜೆ ಎಂ ವಿ ವಕೀಲರಿಂದ**

**12. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

13. ನಾನು ನೊಂದಾಯಿತ ಮುಂಗಡ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ಸದರಿ ನಿಪಿ 1 ರಲ್ಲಿಯ ಸಾಕ್ಷಿ ತಾನು ಸಹಿ ಮಾಡಿರುವುದನ್ನು ಗುರುತಿಸಿದ್ದು ಅದನ್ನು ಈಗ ನಿಪಿ 1(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ 1 ರಲ್ಲಿ ಪ್ರತಿವಾದಿ ಸಹಿ ಮಾಡಿರುತ್ತಾರೆ ಸದರಿ ಪ್ರತಿವಾದಿಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ಸಾಕ್ಷಿ ಗುರುತಿಸಿದ್ದರ ಮೇರೆಗೆ ನಿಪಿ 1(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ಕುಮಾರ್ ಮತ್ತು ರಾಜು ಎಂದು ಇಬ್ಬರು ಸಾಕ್ಷಿದಾರರು ಸಹಿ ಮಾಡಿರುತ್ತಾರೆ ಅದನ್ನು ನೋಡಿದರೆ ಗುರುತಿಸುತ್ತೇನೆ ಸದರಿ ಸಾಕ್ಷಿಯ ಸಹಿಗಳನ್ನು ಸಾಕ್ಷಿ ಗುರುತಿಸಿದ್ದರ ಮೇರೆಗೆ ನಿಪಿ 1(ಸಿ) ಮತ್ತು 1(ಡಿ) ಎಂದು ಗುರುತಿಸಲಾಯಿತು. ಸದರಿ ನಿಪಿ 1 ನ್ನು ಪತ್ರ ಬರಹಗಾರರಾದ ಅವಿನಾಶ್ ರವರು ತಯಾರಿಸಿರುತ್ತಾರೆ ಸದರಿ ಅವಿನಾಶ್ ರವರು ಕೂಡ ನಿಪಿ 1 ರಲ್ಲಿ ಸಹಿ ಮಾಡಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಸದರಿ ಸಹಿಯನ್ನು ನಿಪಿ (ಇ) ಎಂದು ಗುರುತಿಸಲಾಯಿತು. ನಾನು ತಿಳುವಳಿಕೆ ನೋಟಿಸನ್ನು ವಕೀಲರಿಂದ ಪ್ರತಿವಾದಿಗಳಿಗೆ ನೀಡಿರುತ್ತೇನೆ ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

14. ನಮ್ಮ ವಕೀಲರು ಪ್ರತಿವಾದಿಗೆ ಕಳುಹಿಸಿರುವ ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 3 ಎಂದು ಗುರುತಿಸಲಾಯಿತು. ನಮ್ಮ ವಕೀಲರು ಅಂಚೆ ರಶೀದಿಯನ್ನು ಕಳುಹಿಸಿರುವುದಕ್ಕೆ ಮತ್ತು ಪ್ರತಿವಾದಿಗೆ ತಿಳುವಳಿಕೆ ನೋಟಿಸ್ ಜಾರಿಯಾಗಿರುವುದಕ್ಕೆ ಸ್ವೀಕೃತಿ ಪ್ರತಿಯನ್ನು ಅಂಚೆ ಇಲಾಖೆಯವರು ನೀಡಿದ್ದು ಅದನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ಸದರಿ ನಿಪಿ 4 ರಲ್ಲಿ ಪ್ರತಿವಾದಿಯು ಸಹಿ ಮಾಡಿದ್ದು ಪ್ರತಿವಾದಿಯ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 4(ಎ) ಎಂದು ಗುರುತಿಸಲಾಯಿತು. ನನ್ನ ಬ್ಯಾಂಕ್ ಅಕೌಂಟ್ ಸ್ಟೇಟ್‌ಮೆಂಟ್ ನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ನಾನು 2 ಪಹಣಿಗಳನ್ನು

ಹಾಜರುಪಡಿಸಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ನಿಪಿ 6 ಮತ್ತು 7 ಎಂದು ಗುರುತಿಸಲಾಯಿತು. ನಾನು ಇ ಸಿ ಯನ್ನು ಹಾಜರುಪಡಿಸಿದ್ದು ಅದನ್ನು ನೋಡಿದರೆ ಗುರುತಿಸುತ್ತೇನೆ ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ನಾನು 2 ಎಂ ಆರ್ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನೋಡಿದರೆ ಗುರುತಿಸುತ್ತೇನೆ ಅವುಗಳನ್ನು ನಿಪಿ 9 ಮತ್ತು 10 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**